ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ

ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ

**ಕೆ.ಪಿ.ಪಿ ಇ-ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 4/2026-27 ದಿನಾಂಕ:10.06.2026**

**ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ- IV ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.**

ಕರ್ನಾಟಕ ರಾಜ್ಯದ ರಾಜ್ಯಪಾಲಕ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ2000ರ ಪ್ರಕಾರ ಐಟಂವಾರು ಇ-ಪ್ರಕ್ಯೂರ್‌ಮೆಂಟ್ ದ್ವಿ-ಲಕೋಟೆ ಪದ್ಧತಿಯಲ್ಲಿ (Double Cover System) ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ 2025-26 ನೇ ಸಾಲಿನ CMIDP ಲೆಕ್ಕಶೀರ್ಷಿಕೆಯಡಿ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅಧಿಕೃತ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ಕೆ.ಪಿ.ಪಿ ಇ-ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **https://eproc.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ.

| | | |
|---|---|---|
| 1 | E-procurement ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿ ಗಳನ್ನು ವೆಬ್ ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: | 10.07.2026 ರ 16.30 ರವರೆಗೆ |
| 2 | ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: | 13.07.2026 ರಂದು 16.35 ನಂತರ |
| 3 | ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: | 14.07.2026 ರಂದು ಬೆಳಗ್ಗೆ 11.30 ನಂತರ (ಸಾಧ್ಯವಾದಲ್ಲಿ) |
| 4 | ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) | e- Procurement ನಿಯಮಾನುಸಾರ |

| ಕ್ರ.ಸಂ. | ಕಾಮಗಾರಿಯ ಹೆಸರು | ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಇ.ಎಂ.ಡಿ. (ರೂ.ಲಕ್ಷಗಳಲ್ಲಿ) | ಕಾಲಮಿತಿ ಮಳೆಗಾಲ ಸೇರಿ |
|---|---|---|---|---|
| 1 | 2 | 3 | 4 | 5 |
| 1 | Improvements to road from Ucchodanahalli village to Konapura approch road in Gauribidanur Taluk. Chikkaballapura Dist(INDENT NO:RDPR/2026-27/RD/WORK_INDENT27284) | 134.54 | 2.02 | 9 ತಿಂಗಳು |
| 2 | Improvements to road from Hosur Allipura main road to Kenkare approch road ,in Gouribidanur taluk,Chikkaballapura Dist (INDENT NO:RDPR/2026-27/RD/WORK_INDENT27285 | 109.03 | 1.65 | 9 ತಿಂಗಳು |
| 3 | Improvements to road from A.C.C.factory to Basavanahalli approch road in Gouribidanur Taluk,Chikkaballapura Dist (INDENT NO:RDPR/2026-27/RD/WORK_INDENT27286) | 166.59 | 2.50 | 9 ತಿಂಗಳು |
| 4 | Improvements to road from Bommashettihalli Village to Kurudi approch road in Gouribidanur Taluk,Chikkaballapura Dist (INDENT NO:RDPR/2026-27/RD/WORK_INDENT27287) | 142.95 | 2.20 | 9 ತಿಂಗಳು |
| | Total | 553.11 | | |

ಸೂಚನೆಗಳು:-

1. ಮೇಲ್ಕಂಡ ಪ್ರಕಟಿತ ಟೆಂಡರ್ ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್ KW- IV ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ.

2. Tender Standard Bidding Document KW- IV ನಿಯಮಾವಳಿಗೆ ಬದ್ಧನಾಗಿದ್ದು, ನಿಯಮಾವಳಿಯಂತೆ ಗುತ್ತಿಗೆದಾರರು ಕೆಳಕಂಡ ಮಾಹಿತಿಯನ್ನು ತಪ್ಪದೇ SCAN ಮಾಡಿ Upload ಮಾಡತಕ್ಕದ್ದು, ಈ ದಾಖಲೆಗಳಿಲ್ಲದ ಟೆಂಡರ್‌ನ್ನು ತಿರಸ್ಕರಿಸಲಾಗುವುದು. ಟೆಂಡರ್ ಪರಿಶೀಲನೆ ಸಮಯದಲ್ಲಿ ಮೂಲ ಪ್ರತಿಗಳನ್ನು ಕಡ್ಡಾಯವಾಗಿ ಹಾಜರು ಪಡಿಸತಕ್ಕದ್ದು.

ಅ. ಕಾಲಂ (5) ರಲ್ಲಿ ನಿಗಧಿ ಪಡಿಸಿರುವ ಇ.ಎಂ.ಡಿ ಮೊತ್ತವನ್ನು ಈ ಪೋರ್ಟಲ್ ನಲ್ಲಿ ಸಲ್ಲಿಸುವುದು.

ಆ. ಪಿ.ಡಬ್ಲ್ಯೂಡಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆ ಪರವಾನಗಿ ಪತ್ರ, ಕಡ್ಡಾಯವಾಗಿ ಅಪ್ಲೋಡ್ ಮಾಡ ತಕ್ಕದ್ದು



Scanned with OKEN Scanner

3. ಮೇಲ್ಕಂಡ ಪ್ರಕಟಿತ ಟೆಂಡರ್ ಸ್ಟಾಂಡರ್ಡ್ ಬಿಡ್ಡಿಂಗ್ ಡಾಕ್ಯುಮೆಂಟ್ KW- IV ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ ಹಾಗೂ ಕಂಡಿಕೆ 3 ರಲ್ಲಿ ತಿಳಿಸಿರುವ ಪೂರ್ವಾರ್ಹತೆಗಳನ್ನ ಗುತ್ತಿಗೆದಾರರು ಪರಿಶೀಲಿಸಿಕೊಂಡು ದಾಖಲೆಗಳನ್ನು ಟೆಂಡರ್‌ನೊಂದಿಗೆ ಸಲ್ಲಿಸಬೇಕಾಗಿರುತ್ತದೆ. ಹಾಗೆ ಮಾಡಲು ವಿಫಲರಾದಲ್ಲಿ, ಅಂತಹ ಟೆಂಡರನ್ನು ತಿರಸ್ಕರಿಸಲಾಗುವುದು.

4. ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಈ ಮೇಲಿನ ಟೆಂಡರ್ ಮೊತ್ತದ ಶೇಕಡ 50 ರಷ್ಟು ರಸ್ತೆ ಕಾಮಗಾರಿಗಳಿಗೆ (ಕಾಮಗಾರಿಗನುಗುಣವಾಗಿ ಹಾಗೂ ಮಾದರಿಯ) ಹಿಂದಿನ 5 ವರ್ಷಗಳ ಅವಧಿಯಲ್ಲಿ ಯಾವುದಾದರೂ ಒಂದು ವರ್ಷದಲ್ಲಿ ನಿರ್ವಹಿಸಿರಬೇಕು ಹಾಗೂ ಕೈಗೊಂಡ ಕಾಮಗಾರಿಯ ವಿವರಣೆಯನ್ನು ಒಳಗೊಂಡಂತೆ ಕಾಮಗಾರಿ ನಿರ್ವಹಣಾ ಅರ್ಹತಾ ಪತ್ರವನ್ನು ಕಾರ್ಯಪಾಲಕ ಇಂಜಿನಿಯರ್ ರವರ ದರ್ಜೆಗೆ ಕಡಿಮೆ ಇಲ್ಲದಂತೆ ಅಧಿಕಾರಿಯ ದೃಢೀಕರಣದೊಂದಿಗೆ ಕಡ್ಡಾಯವಾಗಿ ಸಲ್ಲಿಸಬೇಕು. ಇಲ್ಲವಾದಲ್ಲಿ ಅಂತಹ ಟೆಂಡರನ್ನು ಪರಿಗಣಿಸುವುದಿಲ್ಲ. ಮುಂದುವರೆದು ಗುತ್ತಿಗೆದಾರರು ತಾವು ನಿರ್ವಹಿಸುತ್ತಿರುವ ಕಾಮಗಾರಿಗಳ ವಿವರಗಳನ್ನು ಕಡ್ಡಾಯವಾಗಿ ಸಂಬಂಧಿಸಿದ ಇಲಾಖೆಯ ಜಿಲ್ಲಾ ಮುಖ್ಯಸ್ಥರಿಂದ ದೃಢೀಕರಣ ಪತ್ರಗಳನ್ನು ಇ-ಪ್ರೋಟಾಲ್‌ನಲ್ಲಿ ಅಪ್ ಲೋಡ್ ಮಾಡುವುದು ತಪ್ಪಿದಲ್ಲಿ ಅಂತಹ ಟೆಂಡರನ್ನು ನೇರವಾಗಿ ತಿರಸ್ಕರಿಸಲಾಗುವುದು. ಹಾಗೂ ಇ.ಎಂ.ಡಿ.ಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ( b-Value) ಕಳೆದ ಐದು ವರ್ಷಗಳ ಟರ್ನ್‌ಓವರ್ ಪ್ರತಿ ಸದರಿ ಟರ್ನ್‌ಓವರ್‌ನಲ್ಲಿ ಕನಿಷ್ಠ ಎರಡು ಆರ್ಥಿಕ ವರ್ಷಗಳಲ್ಲಿ ಕಾಮಗಾರಿಯ ಅಂದಾಜು ಮೊತ್ತದ ಎರಡರಷ್ಟು ಸರಾಸರಿ ಆರ್ಥಿಕ ಪ್ರಗತಿ (ಟರ್ನ್‌ಓವರ್) ಸಾಧಿಸಿರಬೇಕು.

5. ಟೆಂಡರ್‌ನಲ್ಲಿ ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಕಡಿಮೆ ದರ ನಮೂದಿಸಲಾಗುವ ಟೆಂಡರ್‌ಗಳಿಗೆ ಟೆಂಡರ್‌ಗಿಟ್ಟ ಮೊತ್ತ ಹಾಗೂ ಗುತ್ತಿಗೆದಾರರು ನಮೂದಿಸಿರುವ ದರಗಳ ವ್ಯತ್ಯಾಸದ ಮೊತ್ತವನ್ನು ಹೆಚ್ಚುವರಿಯಾಗಿ ಡಿ.ಡಿ. / ಎನ್.ಎಸ್.ಸಿ. /ಎಫ್.ಡಿ.ಆರ್ ಯಾವುದಾದರೂ ಒಂದು ರೂಪದಲ್ಲಿ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ ರವರ ಹೆಸರಿನಲ್ಲಿ ಒತ್ತೆ ಮಾಡಿ ಕರಾರು ಮಾಡಿಕೊಳ್ಳುವ ಸಮಯದಲ್ಲಿ ಸಲ್ಲಿಸಬೇಕಾಗಿರುತ್ತದೆ.

6. ಟೆಂಡರ್ ಊರ್ಜಿತ ಅವಧಿಯು ಟೆಂಡರ್ ತೆರೆದ ದಿನಾಂಕದಿಂದ KW-IV ಗೆ ಕನಿಷ್ಠ 90 ದಿನಗಳು ಊರ್ಜಿತ ಅವಧಿಯನ್ನು ಒಳಗೊಂಡಿರುತ್ತದೆ.

7. ಟೆಂಡರ್‌ಗಳನ್ನು ಯಾವುದೇ ಹಂತದಲ್ಲಿ ಯಾವುದೇ ಕಾರಣವಿಲ್ಲದೆ ನಿರಾಕರಿಸುವ / ರದ್ದುಗೊಳಿಸುವ ಹಕ್ಕನ್ನು ಈ ಕೆಳಕಂಡ ಅಧಿಕಾರಿಗಳು ಕಾಯ್ದಿರಿಸಿಕೊಂಡಿದ್ದಾರೆ. ಹಾಗೂ ಷರತ್ತುಸ್ನೊಳಗೊಂಡ Conditional) ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

8. ಸ್ಟಾಂಡರ್ಡ್ ಬಿಡ್ಡಿಂಗ್ ಡಾಕ್ಯುಮೆಂಟ್ ನಿಯಮಾವಳಿಗಳ ಪ್ರಕಾರ ಅನುಮೋದಿತ ಗುತ್ತಿಗೆದಾರರು ಗುತ್ತಿಗೆ ಮೊತ್ತದ ಶೇಕಡ 5 ರಷ್ಟು ಭದ್ರತಾ ಠೇವಣಿಯನ್ನು ಟೆಂಡರ್ ಕರಾರು ಸಮಯದಲ್ಲಿ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ ಇವರ ಹೆಸರಿನಲ್ಲಿ ಪಾವತಿಯಾಗುವಂತೆ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ/ಪೇಆರ್ಡರ್/ಬ್ಯಾಂಕರ್ಸ್ ಚೆಕ್/ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಒತ್ತೆಯಿಟ್ಟು ಸಲ್ಲಿಸಬೇಕು. ತಪ್ಪಿದಲ್ಲಿ ಟೆಂಡರನ್ನು ತಿರಸ್ಕರಿಸಲಾಗುವುದು ಹಾಗೂ ಸಲ್ಲಿಸಿರುವ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಹೊಸದಾಗಿ ಟೆಂಡರ್ ಕರೆದಾಗ ಹೆಚ್ಚುವರಿಯಾಗುವ ಮೊತ್ತವನ್ನು ತಮ್ಮಿಂದ ಭರಿಸಬೇಕಾಗುತ್ತದೆ ಹಾಗೂ ತಮ್ಮ ನೊಂದಣಿಯನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು.

09. ಕಳೆದ 5 ವರ್ಷಗಳ ಆಡಿಟರ್ ಬ್ಯಾಲೆನ್ಸ್ ಶೀಟ್‌ಗಳನ್ನು ಭಾರತೀಯ ಆದಾಯ ಇಲಾಖೆಗೆ ಸಲ್ಲಿಸಲಾಗಿರುವ ಸ್ವೀಕೃತಿ ಪತ್ರದೊಂದಿಗೆ (ಚಾರ್ಟಡ್ ಅಕೌಂಟೆಂಟ್‌ನಿಂದ ಸಹಿಯೊಂದಿಗೆ ಪಡೆದು) ಟೆಂಡರ್‌ನೊಂದಿಗೆ ಕಡ್ಡಾಯವಾಗಿ ಸಲ್ಲಿಸಬೇಕಾಗಿರುತ್ತದೆ. ತಪ್ಪಿದಲ್ಲಿ ಅಂತಹ ಟೆಂಡರ್‌ಗಳನ್ನು ನೇರವಾಗಿ ತಿರಸ್ಕರಿಸಲಾಗುವುದು.

10 ಕಾಮಗಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಅವಶ್ಯಕವಾಗಿ ಬೇಕಾಗಿರುವ ಯಂತ್ರೋಪಕರಣಗಳು ಹಾಗೂ ಇತರೆ ಸಾಮಗ್ರಿಗಳನ್ನು ಗುತ್ತಿಗೆದಾರರೇ ಒದಗಿಸಿಕೊಳ್ಳಬೇಕಾಗಿರುತ್ತದೆ. ಯಾವುದೇ ಯಂತ್ರೋಪಕರಣಗಳನ್ನು ಮತ್ತು ಸಲಕರಣೆಗಳನ್ನಾಗಲೀ ಇಲಾಖೆಯಿಂದ ಸರಬರಾಜು ಮಾಡಲಾಗುವುದಿಲ್ಲ. ಕಾಮಗಾರಿಗೆ ಉಪಯೋಗಿಸುವ ಸಾಮಗ್ರಿಗಳನ್ನು ಗುಣ ನಿಯಂತ್ರಣ ಪ್ರಯೋಗಾಲಯ (Laboratory) ದಿಂದ ಅಗತ್ಯಕ್ಕನುಗುಣವಾಗಿ ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ಪರೀಕ್ಷೆ ಮಾಡಿಸಿಕೊಂಡು ಅನುಮೋದಿತ ಗುಣಮಟ್ಟದ ಸಾಮಗ್ರಿಗಳನ್ನು ಇಲಾಖಾ ನಿರ್ದೇಶನದ ಮೇರೆಗೆ ಕಾಮಗಾರಿಗೆ ಉಪಯೋಗಿಸತಕ್ಕದ್ದು.

11. ಕಾಮಗಾರಿಗೆ ಬೇಕಾದ ಯಾವುದೇ ಸಾಮಗ್ರಿಗಳನ್ನು ( Cement, Steel, Ashpalt, and other allied materials) ಇಲಾಖೆಯು ಗುತ್ತಿಗೆದಾರರಿಗೆ ಸರಬರಾಜು ಮಾಡುವುದಿಲ್ಲ.

12.ಅನಿವಾರ್ಯ ಕಾರಣಗಳಿಂದ ಸದರಿ ಟೆಂಡರ್ ಅವಧಿ ವಿಸ್ತರಿಸಿದಲ್ಲಿ ಅದರ ಪ್ರಕಟಣೆಯನ್ನು https://eproc.karnataka.gov.in ವೆಬ್ ಸೈಟ್‌ನಲ್ಲಿ ನೀಡಲಾಗವುದು ಅಥವಾ ಗುತ್ತಿಗೆದಾರರು ಈ ವಿಭಾಗ ಕಛೇರಿಯನ್ನು ಸಂಪರ್ಕಿಸಿ ವಿಸ್ತರಣಾ ಅವಧಿಯನ್ನು ತಿಳಿದುಕೊಳ್ಳಬಹುದು. ಅಂಚೆ ಮೂಲಕ ಟೆಂಡರ್ ಅವದಿ ವಿಸ್ತರಣಯ ದಿನಾಂಕವನ್ನು ಗುತ್ತಿಗೆದಾರರಿಗೆ ತಿಳಿಸಲಾಗುವುದಿಲ್ಲ.

13. ಷೆಡ್ಯೂಲ್-ಬಿಯನ್ನು ವೆಬ್ ಸೈಟ್‌ದಲ್ಲಿ ನೋಡಬಹುದು ಮತ್ತು ಷೆಡ್ಯೂಲ್ -ಬಿ ಯನ್ನು ವೆಬ್ ಸೈಟ್‌ನಲ್ಲಿ ಭರ್ತಿ ಮಾಡುವುದು

14. ಸರಕಾರದ ಆದೇಶ ಸಂಖ್ಯೆ LET 2006 Dt. 1 8-01-2007 ರಂತೆ ಕಾರ್ಮಿಕರ ಕಲ್ಯಾಣ ಮಂಡಳಿಗೆ ಶೇ. 1% ರಂತೆ ಸುಂಕವನ್ನು ಗುತ್ತಿಗೆದಾರರ ಬಿಲ್ಲನಲ್ಲಿ ಕಟಾವು ಮಾಡಲಾಗುವುದು.

15. ಕಾಮಗಾರಿಗೆ ಉಪಯೋಗಿಸುವ ಸಾಮಾಗ್ರಿಗಳನ್ನು ಗುಣ ನಿಯಂತ್ರಣ ಪ್ರಯೋಗಾಲಯ (LABORATORY) ದಿಂದ ಅಗತ್ಯಗನುಗುಣವಾಗಿ ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ಪರೀಕ್ಷೆ ಮಾಡಿಸಿಕೊಂಡು ಅನುಮೋದಿತ ಗುಣಮಟ್ಟದ ಸಾಮಾಗ್ರಿಗಳನು ಇಲಾಖಾ ನಿರ್ದೇಶನದ ಮೇರೆಗೆ ಕಾಮಗಾರಿಗಳಿಗೆ ಉಪಯೋಗಿಸತಕ್ಕದ್ದು. ಕಾಮಗಾರಿಯನ್ನು 3rd Party ತಪಾಸಣೆಗೊಳಿಸಪಡಿಸತಕ್ಕದ್ದು.

16.ಪಾನ್ ಕಾರ್ಡ, ಜಿ.ಎಸ್.ಟಿ ಸರ್ಟಿಫಿಕೇಟ್‌ನ್ನು ಕಡ್ಡಾಯವಾಗಿ ಅಪ್ಲೋಡ್ ಮಾಡ ತಕ್ಕದ್ದು

17 ಮೇಲ್ಕಂಡ ಕಾಮಗಾರಿಗಳ ಅಂದಾಜು ಮೊತ್ತದಲ್ಲಿ ಯಾವುದೇ ಹೆಚ್ಚುವರಿ ಬದಲಾವಣೆಯಾದಲ್ಲಿ ಗುತ್ತಿಗೆದಾರರು ಇ.ಎಂ.ಡಿ ವ್ಯತ್ಯಾಸದ ಮೊತ್ತವನ್ನು ಡಿ.ಡಿ ರೂಪದಲ್ಲಿ ಸಲ್ಲಿಸತಕ್ಕದ್ದು

18. ಟೆಂಡರ್ ಅರ್ಜಿಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂತುರಿಗಿಸುವುದಿಲ್ಲ, ಮತ್ತು ನಿಬಂಧನೆಯುಕ್ತ ಅರ್ಜಿ ಮತ್ತು ಟೆಂಡರ್‌ಅನ್ನು ಪರಿಗಣಿಸಲಾಗುವುದಿಲ್ಲ.

19 ಎಲ್ಲಾ ಕಾಮಗಾರಿಗಳು KW- IV (ದ್ವಿಲಕೋಟೆಪದ್ಧತಿ)ರ ಷರತ್ತುಗಳಿಗೆ ಒಳಪಡುತ್ತವೆ.

20. ಈ ವಿಭಾಗದಿಂದ ಈಗಾಗಲೇ ಕಾಮಗಾರಿಗಳನ್ನು ಕೈಗೆತ್ತಿಕೊಂಡು ನಿಗಧಿತ ಅವಧಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸದೇ ಇರುವ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸುವಂತಿಲ್ಲ, ಒಂದು ವೇಳೆ ಭಾಗವಹಿಸಿದರೆ ಅಂತಹ ಗುತ್ತಿಗೆದಾರರ ಟೆಂಡರ್‌ನ್ನು ಮಾನ್ಯತೆ ಮಾಡಲಾಗುವುದಿಲ್ಲಾ.

21.ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ-ಪ್ರಕ್ಯೂರ್‌ಮೆಂಟ್ ಪ್ರೋಟಾಲ್ (Viz.,https://eproc.karnataka.gov.In) ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಫ್‌ಲೋಡ್‌ಗೆ ಸಂಬಂಧಿಸಿದಂತೆ ಇ-ಪ್ರಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: + 91 80 25501216 ಮತ್ತು +91 80 25501227 ನ್ನು ಸಂಪರ್ಕಿಸಬಹುದಾಗಿದೆ.

22 ಯಾವ ಕಾರಣವನ್ನು ಸಹಾ ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ನಿರಾಕರಿಸುವ ಅಧಿಕಾರವನ್ನು ಟೆಂಡರ್ ಸ್ವೀಕರಿಸುವ ಅಧಿಕಾರಿಯವರು ಕಾದಿರಿಸಿಕೊಂಡಿರುತ್ತಾರೆ.



Scanned with OKEN Scanner

23 ಸದರಿ ಕಾಮಗಾರಿಯನ್ನು ನಿಗಧಿತ ಅವಧಿಯೊಳಗೆ ಮುಗಿಸುವುದು ಅವಶ್ಯಕವಾಗಿರುತ್ತದೆ, ಈ ಕಾಮಗಾರಿಗಳು ಪೂರ್ಣಗೊಂಡ ನಂತರ 2 ವರ್ಷ ನಿರ್ವಹಣಾ ಅವಧಿಯನ್ನು ಒಳಗೊಂಡಿರುತ್ತದೆ. ಒಂದು ವೇಳೆ ಕಾಮಗಾರಿಯ ಕಾರ್ಯದೇಶ ನೀಡಿದ ನಂತರ 1 ವಾರದ ಅವಧಿಯಲ್ಲಿ ಕಾಮಗಾರಿಯನ್ನು ಪ್ರಾರಂಭಿಸದೇ ಇದ್ದಲ್ಲಿ ಅಂತಹ ಟೆಂಡರ್ ಗುತ್ತಿಗೆಯನ್ನು ರದ್ದುಪಡಿಸುವ ಹಕ್ಕನ್ನು ಕಾರ್ಯಪಾಲಕ ಅಭಿಯಂತರರು ಕಾಯ್ದಿರಿಸಿಕೊಂಡಿದಾಗ ಹಾಗೂ ಸದರಿ ಕಾಮಗಾರಿಯ ದೋಷದ ನಿರ್ಮಾಣ ಹೊಣೆಗಾರಿಕೆ ಅವಧಿಯು 2 ವರ್ಷಗಳನ್ನೊಳಗೊಂಡಿದ್ದು, ಈ ಸಮಯದಲ್ಲಿ ಸದರಿ ಕಾಮಗಾರಿಯಲ್ಲಿ ದೋಷಗಳು ಕಂಡುಬಂದಲ್ಲಿ ಯಶಸ್ವಿ ಗುತ್ತಿಗೆದಾರರು ತಮ್ಮ ಸ್ವಂತ ಆರ್ಥಿಕ ಹೊಣೆ ಮತ್ತು ವೆಚ್ಚದಲ್ಲಿ ಕಾಮಗಾರಿಯನ್ನು ಸರಿಪಡಿಸಿ ನಿರ್ವಹಿಸಬೇಕಾಗಿರುತ್ತದೆ. ತಪ್ಪಿದಲ್ಲಿ ಅಂತಹ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು ಹಾಗೂ ಕಾಮಗಾರಿಯನ್ನು ಗುತ್ತಿಗೆದಾರರು ಇತರೆ ಬಿಲ್ಲುಗಳಲ್ಲಿ ಹಣವನ್ನು ಕಟಾಯಿಸಿಕೊಂಡು ಬೇರರೆ ಗುತ್ತಿಗೆದಾರರಿಂದ ಕಾಮಗಾರಿಯನ್ನು ನಿರ್ವಹಿಸಲಾಗುವುದು.

ಸಹಿ/-

ಕಾರ್ಯಪಾಲಕ ಅಭಿಯಂತರರು,
ಪಂ.ರಾ.ಇಂ. ವಿಭಾಗ,
ಚಿಕ್ಕಬಳ್ಳಾಪುರ

ಸಂಖ್ಯೆ: ಕಾಅ/ಪಂರಾಇಂವಿ/ಸಿಬಿಸಿ/ಟೆಂಡರ್ ಪ್ರಕಟಣೆ/ /2026-27 ದಿನಾಂಕ:

ಪ್ರತಿಯನ್ನು ಘನ ಮಾಹಿತಿಗಾಗಿ:-

1. ಮುಖ್ಯ ಇಂಜನಿಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್, ಇಲಾಖೆ ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು-9 ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಜಿಲ್ಲಾಧಿಕಾರಿಗಳು,ಚಿಕ್ಕಬಳ್ಳಾಪುರಜಿಲ್ಲೆ, ಚಿಕ್ಕಬಳ್ಳಾಪುರ ರವರ ಮಾಹಿತಿಗೆ ಮತ್ತು ಜಿಲ್ಲಾ ಟೆಂಡರ್ ಬುಲೆಟಿನ್ ನಲ್ಲಿ ಪ್ರಕಟಿಸಲು ಕೋರಿ ಸಲ್ಲಿಸಿದೆ.
3. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಅಧೀಕ್ಷಕ ಅಭಿಯಂತರರು, ಪಂಚಾಯತ್ ರಾಜ್ ಇಂಜನಿಯರಿಂಗ್ ವೃತ್ತ/ಲೋಕೋಪಯೋಗಿ/ಸಣ್ಣ ನೀರಾವರಿ ಬೆಂಗಳೂರು ವೃತ್ತ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.

ಪ್ರತಿಯನ್ನು:- ಈ ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ತಮ್ಮ ಕಛೇರಿಗಳ ಸೂಚನಾ ಫಲಕದಲ್ಲಿ ಸದರಿ ಟೆಂಡರ್ ಪ್ರಕಟಣೆಯನ್ನು ಜಾಹೀರಾತುಗೊಳಿಸಲು ಕೋರಲಾಗಿದೆ.

1. ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಕೋಲಾರ, ಬೆಂಗಳೂರು(ನಗರ), ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ತುಮಕೂರು.
2. ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಚಿಕ್ಕಬಳ್ಳಾಪುರ
3. ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ ಚಿಕ್ಕಬಳ್ಳಾಪುರ
4. ಕಾರ್ಯಪಾಲಕ ಅಭಿಯಂತರರು, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಿಕ್ಕಬಳ್ಳಾಪುರ
5. ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಚಿಕ್ಕಬಳ್ಳಾಪುರ, ಬೆಂಗಳೂರು(ನಗರ), ಬೆಂಗಳೂರು (ಗ್ರಾಮಾಂತರ) [illegible]
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ಉಪವಿಭಾಗ, ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಬಾಗೇಪಲ್ಲಿ, ಶಿಡ್ಲಘಟ್ಟ & ಗುಡಿಬಂಡೆ
7. ಕಾರ್ಯಪಾಲಕ ಅಭಿಯಂತರರ ಮೇಜಗೆ, ಲೆಕ್ಕ ಪರಿಶೋಧನಾಧಿಕಾರಿ/ನಗದು ವಿಭಾಗ ರವರಿಗೆ ನೀಡಿದೆ.
8. ವಿಭಾಗ ಕಛೇರಿ ಸೂಚನಾ ಫಲಕಕ್ಕೆ.

ಕಾರ್ಯಪಾಲಕ ಅಭಿಯಂತರರು,
ಪಂ.ರಾ.ಇಂ. ವಿಭಾಗ,
ಚಿಕ್ಕಬಳ್ಳಾಪುರ

Scanned with OKEN Scanner
Scanned with OKEN Scanner